

# ನಮ್ಮ ಸುತ್ತಮುತ್ತಲ ಪ್ರದೇಶವನ್ನು ಮಕ್ಕಳಿಗಾಗಿ ಸುರಕ್ಷಿತವಾಗಿಡುವುದು

*ವಾರ್ಡ್ ನಂ.198 ನ ಎಲ್ಲಾ ನಿವಾಸಿಗಳಿಗಾಗಿ ಕಾರ್ಯಾಗಾರ (ಹೆಮ್ಮಿಗೆಪುರ ವಾರ್ಡ್)*

**ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್** ಮತ್ತು **ಬೃಹತ್ ಬೆಂಗಳೂರು ಮಹಾನಗರಪಾಲಿಕೆ** ಸಹಯೋಗದಲ್ಲಿ **ಎನ್‌ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್** ಆಯೋಜಿಸಿದೆ

ಇತ್ತೀಚೆಗೆ, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ವಾರ್ಡ್ 198ರ ವಾಜರಹಳ್ಳಿಯ ಬಾಲಾಜಿ ಲೇಔಟ್ ಪರಿಸರದಲ್ಲಿ ಐದು ವರ್ಷದ ಮಗುವಿನ ಮೇಲೆ ಕ್ರೂರವಾಗಿ ಅತ್ಯಾಚಾರವೆಸಗಲಾಗಿದೆ. ಈ ಹೀನಾಯ ಕೃತ್ಯವೆಸಗಿದ ಆರೋಪಿಯನ್ನು ಬಂಧಿಸಲಾಗಿದೆ ಮತ್ತು ಜೈಲಿಗೆ ತಳ್ಳಲಾಗಿದೆ. ಆದರೆ ಮಗು ಈ ದಾಳಿಯಲ್ಲಿ ಬದುಕುಳಿಯಲಿಲ್ಲ.

ಮಗುವಿನ ಮೇಲೆ ಲೈಂಗಿಕ ಹಲ್ಲೆ ನಮ್ಮ ಸಮಾಜದಲ್ಲಿ ಗಂಭೀರ ಸಮಸ್ಯೆಯಾಗಿದೆ. ಮಕ್ಕಳು ಹೆಚ್ಚು ಹೆಚ್ಚಾಗಿ ಲೈಂಗಿಕ ಹಿಂಸೆ ಮತ್ತು ಲೈಂಗಿಕ ಅಶಿಸ್ತಿಗೆ ಗುರಿಯಾಗುತ್ತಿದ್ದಾರೆ. ಹಾಗಿದ್ದರೂ, ನಾವು ಅದು ವ್ಯಾಪಕವಾಗುತ್ತಿರುವ ಬಗ್ಗೆ ಮಾತನಾಡಲು ಹಿಂಜರಿಯುತ್ತಿದ್ದೇವೆ. ಹೀಗಾಗಿ, ನಾವು ಯಾವುದೇ ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದೇವೆ. ಫಲಿತಾಂಶವಾಗಿ, ನಮ್ಮ ನೆರೆಹೊರೆ, ಮನೆಗಳು, ಶಾಲೆಗಳು, ರಸ್ತೆಗಳು ಮತ್ತು ಮಳಿಗೆಗಳು ಸುರಕ್ಷಿತವಾಗಿಲ್ಲ. ವಾರ್ಡ್ 198 ವಸತಿಪ್ರದೇಶಗಳಿರುವ ನೆರೆಹೊರೆಯಿಂದಲೇ ತುಂಬಿಕೊಂಡಿದೆ. ಹೀಗಾಗಿ ಸಾವಿರಾರು ಮಂದಿ ಮಕ್ಕಳು ತಮ್ಮ ಸುತ್ತಲಿನ ಪ್ರದೇಶವನ್ನು ಸುರಕ್ಷಿತವಾಗಿಡಲು ತಮ್ಮ ಹಿರಿಯರ ಮೇಲೆ ವಿಶ್ವಾಸವಿಟ್ಟಿದ್ದಾರೆ ಮತ್ತು ಎಲ್ಲಾ ರೀತಿಯಲ್ಲಿ ಸುಭದ್ರವಾಗಿದೆ ಎಂದುಕೊಂಡಿದ್ದಾರೆ. ಆದರೆ ಕ್ರೂರ ಅತ್ಯಾಚಾರ ಮತ್ತು ಸಣ್ಣ ಮಗುವಿನ ಕೊಲೆ ಬಹಿರಂಗಪಡಿಸಿರುವ ವಿಷಯವೆಂದರೆ, ನಮ್ಮ ಮನೆಗಳು, ಶಾಲೆಗಳು ಮತ್ತು ನೆರೆಹೊರೆಗಳು ಸುರಕ್ಷಿತವಾಗಿಲ್ಲ. ಮಕ್ಕಳು ನಮ್ಮ ಸಾಮೂಹಿಕ ಅಲಕ್ಷ್ಯದ ಬಲಿಪಶುವಾಗುತ್ತಿದ್ದಾರೆ. ಇದು ನಿಲ್ಲಬೇಕು.

**ಎನ್‌ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್, ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್** ಸಹಯೋಗದಲ್ಲಿ ಮತ್ತು ನಮ್ಮ ಕಾರ್ಪೋರೇಟರ್ ಶ್ರೀ ಆರ್ಯ ಶ್ರೀನಿವಾಸ್ ಅವರ ಸಕ್ರಿಯ ಬೆಂಬಲ ಮತ್ತು ಸಹಕಾರದ ಜೊತೆಗೆ, **"ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಮಕ್ಕಳಿಗಾಗಿ ಸುರಕ್ಷಿತವಾಗಿಡುವುದು"** ಎನ್ನುವ ಕಾರ್ಯಾಗಾರಕ್ಕೆ ನಿಮ್ಮನ್ನು ಆಹ್ವಾನಿಸುತ್ತಿದ್ದೇವೆ.

**2017 ಅಕ್ಟೋಬರ್ 28, 2017 ರಂದು ಶನಿವಾರ ಸರ್ಕಾರಿ ಕನ್ನಡ ಹೈಯರ್ ಸೆಕೆಂಡರಿ ಸ್ಕೂಲ್, ವಾಜರಹಳ್ಳಿ, ಹಾಲಿಡೇ ವಿಲೇಜ್ ರೆಸಾರ್ಟ್ ರಸ್ತೆ, ಕನಕಪುರ ರಸ್ತೆ, ಬೆಂಗಳೂರು, ಗೂಗಲ್ ನಕ್ಷೆ:** https://maps.google.com/?q=12.873625,77.542625

## ಕಾರ್ಯಕ್ರಮ

2.30 pm ಸ್ವಾಗತ: ಶ್ರೀ ಪ್ರಕಾಶ್

2.40 pm ದೀಪ ಬೆಳಗುವುದು: ಶ್ರೀ ಆರ್ಯ ಶ್ರೀನಿವಾಸ್, ಕಾರ್ಪೋರೇಟರ್, ವಾರ್ಡ್ 198 (ಹೆಮ್ಮಿಗೆಪುರ) ಮತ್ತು ವಾರ್ಡ್ ಸಮಿತಿ ಸದಸ್ಯರು, ನಂತರ ಅವರಿಗೆ ಸನ್ಮಾನ

2.45 pm ಕಾರ್ಯಾಗಾರಕ್ಕೆ ಪೀಠಿಕೆ: ಶ್ರೀ ಆರ್ಯ ಶ್ರೀನಿವಾಸ್, ಕಾರ್ಪೋರೇಟರ್

3.00 pm ಮಕ್ಕಳ ಮೇಲೆ ಲೈಂಗಿಕ ಹಲ್ಲೆ ನಿಭಾಯಿಸುವುದು– ಲೈಂಗಿಕ ಹಲ್ಲೆಗಳ ಕಾಯ್ದೆಯಿಂದ ಮಕ್ಕಳನ್ನು ರಕ್ಷಿಸಲು ಒಂದು ಪೀಠಿಕೆ, 2012: ಶ್ರೀ ಅಶೋಕ್ ಜಿ ವಿ, ವಕೀಲರು ಮತ್ತು ಸಹಭಾಗಿ, ಫ್ಯಾಕ್ಟಮ್ ಲಾ

3.30 pm ಮಕ್ಕಳ ಮೇಲೆ ಲೈಂಗಿಕ ಹಲ್ಲೆಯನ್ನು ತಡೆಯುವುದು– ಮಗುವಿಗೆ ಸುರಕ್ಷಿತ ಸ್ಥಳಗಳನ್ನು ಒದಗಿಸುವ ಪ್ರಯತ್ನ: ಶ್ರೀಮತಿ, ಸುಜಾ ಸುಕುಮಾರನ್, ಹಿರಿಯ ಸಂಯೋಜಕರು, ಅಡ್ವಕಸಿ & ಇಂಟಿಗ್ರೇಶನ್ ಸಪೋರ್ಟ್, ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್

4.00 pm ಮಕ್ಕಳಿಗೆ ಸುರಕ್ಷಿತ ಪರಿಸರದ ಭರವಸೆ ನೀಡುವ ಬಗ್ಗೆ ಚರ್ಚೆ: ಅಧ್ಯಕ್ಷರು, ಡಾ ನಿರ್ಮಲಾ ಬುಗ್ಗಿ, ಎಂಬಿಬಿಎಸ್, ಎಂಡಿ (ಪೀಡಿಯಾಟ್ರಿಕ್ಸ್), ಮುಖ್ಯ ಆರೋಗ್ಯ ಅಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

4.30 pm ವಾರ್ಡ್ ಸಮಿತಿಗಳ ಪರಿಚಯ ಮತ್ತು ವಾರ್ಡ್ ಸಮಿತಿ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು.: ಶ್ರೀ ಲಿಯೋ ಎಫ್ ಸಾಲ್ಡಾನಾ, ಸಂಯೋಜಕರು, ಎನ್‌ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್

4.45 pm "ನಗರ ನೈರ್ಮಲ್ಯ" –ನಿರ್ಣಾಯಕ ಪಾತ್ರಗಳ ಜೊತೆಗೆ ತ್ಯಾಜ್ಯ ನಿರ್ವಹಣೆ ಬಗ್ಗೆ ಸಾಕ್ಷ್ಯಚಿತ್ರ. ಮುಖ್ಯ ಪಾತ್ರಧಾರಿಗಳು– ದಿವಂಗತ ಶ್ರೀಮತಿ ವೈಶಾಲಿ ಕಾಸರವಳ್ಳಿ ಶ್ರೀಮತಿ ಪ್ರತಿಭಾ ನಂದಕುಮಾರ್, ಮತ್ತು ಶ್ರೀ ರಮೇಶ್ ಅರವಿಂದ್.

5.00 pm ಘನ ತ್ಯಾಜ್ಯ ನಿರ್ವಹಣೆಯ ಭರವಸೆ ವಾರ್ಡ್ ಮಟ್ಟದಲ್ಲಿ: ಡಾ ಶ್ವೇತಾ ರಾವ್ ಡನಕ, ನಗರ ಯೋಜನೆ ಸಲಹೆಗಾರರು ಮತ್ತು ಸಮಾಜವಾದಿ ಎನ್‌ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್

5.15 pm ನೆರೆಹೊರೆಯನ್ನು ಸ್ವಚ್ಛ ಮತ್ತು ಆರೋಗ್ಯಕಾರಿಯಾಗಿ ಇಡುವ ಬಗ್ಗೆ ಚರ್ಚೆ: ಅಧ್ಯಕ್ಷತೆ, ಡಾ ಸಂಧ್ಯಾ, ಎಂಬಿಬಿಎಸ್, ನೋಡಲ್ ಹೆಲ್ತ್ ಆಫೀಸರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5.30 pm ಸಂವಾದ– ಶ್ರೀ ಝಾಕೀರ್ ಹುಸೇನ್, ಉಪ ಮುಖ್ಯ ಇಂಜಿನಿಯರ್, ಕನಕಪುರ ರಸ್ತೆ ನಿರ್ವಹಣೆಯ ಬೆಂಗಳೂರು ಮೆಟ್ರೋ ಇಂಜಿನಿಯರ್ಸ್, ಪಾದಾಚಾರಿಗಳು ಮತ್ತು ಸಾರಿಗೆಯ ಸುರಕ್ಷಿತ ಚಲನೆ

6.00 pm ಧನ್ಯವಾದಗಳು: ಶ್ರೀ ಕೆ ಆರ್ ಮಲ್ಲೇಶ್, ಕ್ಷೇತ್ರವಾರು ಸಂಯೋಜಕರು, ಎನ್‌ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್









ನಿಮ್ಮ ಕುಟುಂಬ ಮತ್ತು ಸ್ನೇಹಿತರು ಈ ಪ್ರಮುಖ ಕಾರ್ಯಾಗಾರಕ್ಕೆ ಕರೆತನ್ನಿ. ಮಕ್ಕಳಿಗೆ ಆದರದ ಸ್ವಾಗತ. ದಯವಿಟ್ಟು ಮೊದಲೇ ನಂಬರ್ 08026713560-61 ಅಥವಾ ಇಮೇಲ್ apoorva@esgindia.org ಗೆ ಸಂಪರ್ಕಿಸಿ ನಿಮ್ಮ ಭಾಗವಹಿಸುವಿಕೆಯನ್ನು ದೃಢಪಡಿಸಿಕೊಳ್ಳಿ.

**(ನೀವು ವಾಜರಹಳ್ಳಿ ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಡುಗೆ ನೀಡುವ ಆಸಕ್ತಿ ಹೊಂದಿದ್ದರೆ ನಿಮ್ಮ ಜೊತೆಗೆ ಅವುಗಳನ್ನು ತನ್ನಿ. ದಯವಿಟ್ಟು ಉತ್ತಮ ಸ್ಥಿತಿಯಲ್ಲಿರುವ ಮತ್ತು ಮಕ್ಕಳಿಗೆ ಸೂಕ್ತವೆನಿಸುವ ಪುಸ್ತಕಗಳು, ಕಾಮಿಕ್ಸ್ ಮತ್ತು ಮ್ಯಾಗಜೀನ್‌ಗಳನ್ನು ಮಾತ್ರ ದಾನ ನೀಡಿ.)**

ಎನ್‌ವಿರಾನ್ಮೆಂಟ್ ಸಪೋರ್ಟ್ ಗ್ರೂಪ್ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಯಾವುದೇ ಲಾಭಕ್ಕಾಗಿ ಕೆಲಸ ಮಾಡದೆ, ಪರಿಸರ ಮತ್ತು ಸಾಮಾಜಿಕ ನ್ಯಾಯದ ಕಾಳಜಿಗಾಗಿ ಸಾರ್ವಜನಿಕ ಹಿತಾಸಕ್ತಿ ಸಂಶೋಧನೆ, ತರಬೇತಿ, ಅಭಿಯಾನ ಮತ್ತು ವಕಾಲತ್ತು ಯೋಜನೆಗಳ ಸಂಸ್ಥೆಯಾಗಿದೆ. **(ಇಎಸ್‌ಜಿ ಬಗ್ಗೆ ತಿಳಿಯಲು:**http://esgindia.org/about-us/esg-team.html).

ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್ ಒಂದು ಮಕ್ಕಳ ಸುರಕ್ಷೆ ಮತ್ತು ಲಿಂಗ ಸ್ವಾವಲಂಬನೆಗಾಗಿ ಕೆಲಸ ಮಾಡುವ ಸರ್ಕಾರೇತರ ಸಂಘಟನೆಯಾಗಿದೆ. **(ಎನ್‌ಫೋಲ್ಡ್ ಇಂಡಿಯಾ ಬಗ್ಗೆ ತಿಳಿಯಲು:** http://enfoldindia.org/team2/)